(ಆ) ಜನಶ್ರೀ ವಿಮಾ ಯೋಜನೆಯಡಿ ಎಷ್ಟು ಜನರಿಗೆ ಪರಿಹಾರ ಧನವನ್ನು ನೀಡಲಾಗಿದೆ? (ವಿವರ ನೀಡುವುದು)

ಡಾ: ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಯನ್ವಯ 2013–14ನೇ ಸಾಲಿನಲ್ಲಿ ಒಟ್ಟು 20 ಕುಟುಂಬ ಗಳಿಗೆ ಪರಿಹಾರವನ್ನು ವಿತರಿಸಲಾಗಿದೆ. ಈ ಪೈಕಿ 12 ಕುಟುಂಬಗಳಿಗೆ ಮರಣ ಹೊಂದಿದವರಿಗೆ `50,000/– ರಂತೆ ಒಟ್ಟು `6,00,000/– ಹಾಗೂ ಅಂಗವಿಕಲತೆ ಉಂಟಾದ 8 ಕುಟುಂಬಳಿಗೆ ` 1,17,000/– ಒಟ್ಟು `7,17,000/– ಗಳನ್ನು ಪರಿಹಾರ ಧನವಾಗಿ ವಿತರಿಸಲಾಗಿದೆ.

2014–15ನೇ ಸಾಲಿನಲ್ಲಿ ಏಪ್ರಿಲ್ ಮಾಹೆಯಿಂದ ಈ ವರೆಗೆ ಅಂಗ ವಿಕಲತೆ ಉಂಟಾದವರಿಗೆ `22,500/–ಗಳನ್ನು ಪರಿಹಾರ ಧನವಾಗಿ ವಿತರಿಸಲಾಗಿದೆ.

(ಆ) ಈ ಯೋಜನೆಯಡಿ ಪರಿಹಾರ ಧನ ವಿತರಿಸಿರುವುದಿಲ್ಲ.

ಪಂಪಸೆಟ್‌ಗಳ ವಿದ್ಯುದೀಕರಣ

951 (915); ಶ್ರೀ ಮೋಹಿಯುದ್ದೀನ್ ಬಾವಾ ಬಿ. ಎ. (ಮಂಗಳೂರು ನಗರ ಉತ್ತರ)

(ಅ) ಪರಿಶಿಷ್ಟ ಜಾತಿಗಳ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಅನ್ವಯ ಪ್ರಸಕ್ತ ಸಾಲಿನಲ್ಲಿ ಈ ವರ್ಗದ ಜನರುಗಳಿಗೆ ಎಷ್ಟು ಪಂಪ್‌ಸೆಟ್‌ಗಳಿಗೆ ವಿದ್ಯುದೀಕರಣ ಮಾಡಲಾಗಿದೆ; (ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಈ ವರ್ಗದ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಕುಟೀರ ಜ್ಯೋತಿ ಕಾರ್ಯಕ್ರಮದ ಕಾಮಗಾರಿಗಾಗಿ ನಿಗದಿಪಡಿಸಿದ್ದ ಅನುದಾನ ಎಷ್ಟು ಹಾಗೂ ಬಿಡುಗಡೆಗೊಂಡ ಅನುದಾನ ಎಷ್ಟು ಮತ್ತು ಬಳಸಿಕೊಳ್ಳಲಾದ ಅನುದಾನ ಎಷ್ಟು? (ವಿವರ ನೀಡುವುದು)

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ರಾಜ್ಯದಲ್ಲಿ 2013–14 ಹಾಗೂ 2014–15 (ಮೇ– 2014ರ ವರೆಗೆ) ಪರಿಶಿಷ್ಟ ಜಾತಿಗಳ ಉಪ ಯೋಜನೆ (ಎಸ್.ಸಿ.ಪಿ) ಹಾಗೂ ಪರಿಶಿಷ್ಟ ಪಂಗಡ ಉಪ ಯೋಜನೆ (ಎಸ್.ಟಿ.ಪಿ) ಯಡಿಯಲ್ಲಿ ವಿದ್ಯುದೀಕರಣ ಗೊಂಡ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಸರಬರಾಜು ಕಂಪನಿವಾರು ಫಲಾನುಭವಿಗಳ ವಿವರಗಳು ಕೆಳಕಂಡಂತಿದೆ.

ವಿದ್ಯುತ್ ಸರಬರಾಜು ಕಂಪನಿ	ಪರಿಶಿಷ್ಟ ಜಾತಿಗಳ ಉಪ ಯೋಜನೆ		ಪರಿಶಿಷ್ಟ ಪಂಗಡ ಉಪ ಯೋಜನೆ	
	2013–14	2014–15 (ಮೇ–14ರ ಅಂತ್ಯಕ್ಕೆ)	2013–14	2014–15 (ಮೇ–14ರ ಅಂತ್ಯಕ್ಕೆ)
ಬೆ.ವಿ.ಸ.ಕಂ.	2276	189	1238	106
ಮ.ವಿ.ಸ.ಕಂ.	69	8	11	1
ಚಾ.ವಿ.ಸ.ಕಂ.	312	11	80	7
ಹು.ವಿ.ಸ.ಕಂ.	622	14	90	21
ಗು.ವಿ.ಸ.ಕಂ.	33	3	0	0
ಒಟ್ಟು	3312	225	1419	135

(ಇ) 2013–14 ಮತ್ತು 2014–15ನೇ ಸಾಲಿನಲ್ಲಿ ಕುಟೀರಜ್ಯೋತಿ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ರಾಜ್ಯದಲ್ಲಿರುವ ಪವನ ವಿದ್ಯುತ್ ಘಟಕಗಳು

952 (916); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)

(ಅ) ರಾಜ್ಯದಲ್ಲಿರುವ ಪವನ ವಿದ್ಯುತ್ ಘಟಕಗಳ ಸಂಖ್ಯೆ ಎಷ್ಟು ಹಾಗೂ ಈ ವಿದ್ಯುತ್ ಘಟಕಗಳು ಉತ್ಪಾದಿಸುವ ವಿದ್ಯುತ್ ಸಾಮರ್ಥ್ಯ (ಮೆಗಾ ವಾಟ್ಸ್) ಎಷ್ಟು; (ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಪವನ ವಿದ್ಯುತ್ ಘಟಕಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪವನ ವಿದ್ಯುತ್ ಘಟಕಗಳ ಸಂಖ್ಯೆ 2697 ಈ ಘಟಕಗಳು 2501 ಮೆ. ವ್ಯಾಟ್ ನಷ್ಟು ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ.

(ಆ) ಸರ್ಕಾರವು ಪವನ ವಿದ್ಯುತ್ ಯೋಜನೆಗಳನ್ನು ಪ್ರೋತ್ಸಾಹಿಸುತ್ತಿದೆ. ರಾಜ್ಯದಲ್ಲಿ ಇದುವರೆಗೂ 12,844 ಮೆ. ವ್ಯಾ. ನಷ್ಟು ಪವನ ವಿದ್ಯುತ್ ಯೋಜನೆಗಳಿಗೆ ಹಂಚಿಕೆ ಮಾಡಲಾಗಿದೆ. ಪ್ರಸ್ತುತ 2,501 ಮೆ. ವ್ಯಾ. ನಷ್ಟು ಯೋಜನೆಗಳು ಅನುಷ್ಠಾನಗೊಂಡಿದ್ದು, ಬಾಕಿ ಯೋಜನೆಗಳ ಅನುಷ್ಠಾನವು ವಿವಿಧ ಹಂತದಲ್ಲಿರುತ್ತದೆ.

ನಿಗದಿತ ಸಮಯದಲ್ಲಿ ಅನುಷ್ಠಾನ ಮಾಡದ ಯೋಜನೆಗಳನ್ನು ರದ್ದು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.